<u>ಸಾಕ್ಷಿಯನ್ನು ದಿನಾಂಕಃ 22.9.2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಕೆ ಸಿ ಎನ್ ವಕೀಲರಿಂದ</u>

ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಅದರಲ್ಲಿರುವ ಮನೆಯ ವಿಚಾರವಾಗಿ 1 ನೇಪ್ರತಿವಾದಿ ಬೇರೆ ದಾವೆ ಹಾಕಿರುತ್ತಾರೆಂದರೆ ಸರಿ. ಸದರಿ ಭಾವಚಿತ್ರವನ್ನು ಕಲಂ65 ಬಿ ರ ಸಾಕ್ಷ್ಯ ಅಧಿನಿಯಮಕ್ಕೆ ಒಳಪಟ್ಟು ನಿಡಿ2 ಎಂದು ಗುರುತಿಸಲಾಯಿತು. ನಿಡಿ2 ರ ಭಾವಚಿತ್ರದ ಮನೆಯ ಹಳೇ ಖಾತಾ ಸಂಃ 1213/1360, ಹೊಸ ಖಾತಾ 1489/1554 ಎಂದರೆ ಸರಿ. ನಿಡಿ2 ರ ಭಾವಚಿತ್ರದಲ್ಲಿ ಕಟ್ಟಿರುವ ಹೊಸ ಮನೆಯ ಮೊದಲು ಹಳೇ ಮನೆಯಲ್ಲಿ ನನ್ನ ತಂದೆ ಮತ್ತು 1 ನೇಪ್ರತಿವಾದಿ ತಂದೆ ಅಣ್ಣ-ತಮ್ಮಂದಿರಾಗಿರುವುದರಿಂದ ವಾಸವಾಗಿದ್ದೆ. ನಿಡಿ2 ರ ಭಾವಚಿತ್ರದ ಮನೆಯ ನಿವೇಶನವನ್ನು ಮೊದಲು 2 ನೇಪ್ರತಿವಾದಿ ಡೇವಿಡ್ ರವರಿಂದ ಖರೀದಿ ಮಾಡಿರುತ್ತಾರೆ. 2 ನೇ ಪ್ರತಿವಾದಿಯ ಮಗಳೇ 1 ನೇ ಪ್ರತಿವಾದಿ ಎಂದರೆ ಸರಿ. 2 ನೇಪ್ರತಿವಾದಿ ಖರೀದಿ ಮಾಡಿರುವ ಆಸ್ತಿ ದಾಖಲೆಗಳನ್ನು ನೋಡಿರುತ್ತೇನೆ.

4. ನನ್ನ ಸಹೋದರ ವಿಷ್ಣುಮೂರ್ತಿ ಇಂಜಿನಿಯರ್ ಎಂದರೆ ಸರಿ. ನನ್ನ ಅಣ್ಣನಾದ ವಿಷ್ಣು ಮೂರ್ತಿ ರವರು ನಿಡಿ2 ರ ಭಾವಚಿತ್ರದ ಮನೆಗೆ ಸಂಬಂಧಿಸಿದ ಪ್ಲಾನ್ ತಯಾರು ಮಾಡಿರುತ್ತಾರೆಂದರೆ ಗೊತ್ತಿಲ್ಲ. ನಿಡಿ2 ರ ಭಾವಚಿತ್ರದ ಮನೆಗೆ ಸಂಬಂಧಿಸಿದ ಲೈಸನ್ಸ ಸರಿಯಾಗಿರುವುದಿಲ್ಲ ಎಂದು ಸಿ ಎಂ ಸಿ ಗೆ ಮತ್ತು ಕೆ ಯು ಡಿ ಎ ದುರು ಕೊಟ್ಟಿರುತ್ತೇನೆ. ನನಗೂ ಮತ್ತು ಅಣ್ಣನಾದ ವಿಷ್ಣು ಮೂರ್ತಿ ರವರಿಗೂ ಕುಟುಂಬದ ವಿಚಾರದಲ್ಲಿ ವೈ ಮನಸ್ಸು ಇರುತ್ತದೆ. ನಾನು ನಿಡಿ2 ರ ಭಾವಚಿತ್ರದ ಮನೆಯ ಲೈಸನ್ಸ ಮತ್ತು ಪ್ಲಾನ್ ಸರಿ ಇರುವುದಿಲ್ಲ ದೆಂದು ಎಲ್ಲಿಯೂ ದಾವೆ ಹಾಕಿಲ್ಲ.

5. ನಿಡಿ25 ರ ದಾನಪತ್ರವನ್ನು ಪ್ರಶ್ನಿಸಿ ಹಾಲಿ ದಾವೆಯನ್ನು ಹಾಕಿರುತ್ತೇನೆ. ನಾನು ನಿಡಿ25 ರ ದಾನಪತ್ರವನ್ನು ವಜಾ ಮಾಡುವಂತೆ ಯಾವುದೇ ದಾವೆ ಹಾಕಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರೆದು ವಿಸ್ತೀರ್ಣ ಸರಿ ಇಲ್ಲ ಎಂದು ಹಾಲಿ ದಾವೆಯಲ್ಲಿ ಹೇಳಿರುತ್ತೇನೆ. ನಿಡಿ25 ರ ದಾನಪತ್ರದಂತೆ 1 ನೇಪ್ರತಿವಾದಿಗೆ ಖಾತೆ ಆಗಿರುತ್ತದೆ ಎಂದರೆ ಸರಿಯಲ್ಲ. ಸಿ ಎಂ ಸಿ ರವರು 1 ನೇಪ್ರತಿವಾದಿಯ ನಿವೇಶನಕ್ಕೆ ಬಂದು ಸ್ಥಳ ಪರಿಶೀಲನೆ

ಮಾಡಿ ದಾಖಲೆ ಕೊಟ್ಟಿರುತ್ತಾರೆಂದರೆ ಗೊತ್ತಿಲ್ಲ. 2 ನೇ ಪ್ರತಿವಾದಿ ನನ್ನ ತಂದೆಗೆ ಯಾವುದೇ ನಿವೇಶನವನ್ನು ಕ್ರಯಪತ್ರದ ಮೂಲಕ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ತಪ್ಪಾಗಿ ವಿಸ್ತೀರ್ಣವನ್ನು ಕೊಟ್ಟು ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ಖಾತೆ ಸೃಷ್ಟಿ ಮಾಡಿರುತ್ತಾರೆಂದರೆ ಸರಿಯಲ್ಲ. ನಾನು ಮತ್ತು ನನ್ನ ತಂದೆ ಪ್ರತಿವಾದಿಗಳಿಗೆ ತೊಂದರೆ ಮಾಡಲು ನಿಪಿ1 ರಿಂದ 44 ರ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ. 1 ನೇಪ್ರತಿವಾದಿ ಕೇಳುವ ಮನೆಯ ನಿವೇಶನಕ್ಕೂ ನನಗೂ ಯಾವುದೇ ಹಕ್ಕು ಇರುವುದಿಲ್ಲ, ಸಾಕ್ಷಿಯು ಮುಂದುವರೆದು ನನ್ನ ತಂದೆ ಖರೀದಿ ಮಾಡಿರುವ ಆಸ್ತಿಯಲ್ಲಿ ಹಕ್ಕು ಇರುತ್ತದೆ.

6. ನಾನು 18 ವರ್ಷದಿಂದ ಬೆಂಗಳೂರಿನಲ್ಲಿ ವಾಸವಾಗಿದ್ದೇನೆ, ಹಾಲಿ ಫೈಲೆಟ್ಸ ನಲ್ಲಿ ವಾಸವಾಗಿರುತ್ತೇನೆ. 2 ನೇಪ್ರತಿವಾದಿ ಆರೋಗ್ಯ ಸರಿ ಇಲ್ಲದೇ ಇರುವಾಗ ನಾನು ನಿವೇಶನ ಬರೆಸಿಕೊಳ್ಳಲು ಪ್ರಯತ್ನಿಸಿರುತ್ತೇನೆಂದರೆ ಸರಿಯಲ್ಲ. 2 ನೇಪ್ರತಿವಾದಿ ನಿವೇಶನವನ್ನು ಬರೆದು ಕೊಡುವುದಿಲ್ಲ ಎಂದು ಹೇಳಿದ್ದಕ್ಕೆ 1 ನೇಪ್ರತಿವಾದಿ ಕಟ್ಟಿರುವ ನಿವೇಶನದ ಮೇಲೆ ಹಾಲಿ ದಾವೆಯನ್ನು ಹಾಕಿರುತ್ತೇನೆಂದರೆ ಸರಿಯಲ್ಲ. ನಿಪಿ1 ರಿಂದ 44 ರ ದಾಖಲಾತಿ ನಿವೇಶನಕ್ಕೂ ನನ್ನ ನಿವೇಶನಕ್ಕೂ ಯಾವುದೇ ಸಂಬಂಧ ಇಲ್ಲ. 2 ನೇಪ್ರತಿವಾದಿ ಬರೆದು ಕೊಟ್ಟಿರುವ ನಿವೇಶನವನ್ನು ರದ್ದು ಮಾಡಲು ಹಿರಿಯ ನಾಗರೀಕರ ನ್ಯಾಯ ಮಂಡಳಿಯಲ್ಲಿ ದಾವೆ ಹಾಕಿರುವ ಬಗ್ಗೆ ಗೊತ್ತಿಲ್ಲ. 1 ನೇಪ್ರತಿವಾದಿ ನನಗೆ ಸೇರಿದ ಯಾವುದೇ ಖಾಲಿ ನಿವೇಶನವನ್ನು ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

(ವಿನೋದ್ ಕುಮಾರ್ ಎಂ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಅಪರ ಜೆ.ಎಂ.ಎಫ್.ಸಿ, ಕೆಜಿಎಫ್.